

ಭಕ್ತಿಯನ್ನು ಆವಾಹಿಸಿಕೊಳ್ಳಬೇಕೆಂದೇ ಇರಲಿಲ್ಲ. ನನಗೆ ಅದು ಅನಿವಾರ್ಯವಾಗಿ ಒದಗಿ ಬಂದಿತ್ತು. ಹಾಗೆ ಮತ್ತೆ ನೃತ್ಯವು ನನ್ನ ಬಳಿಗೆ ಬಂದಾಗ ಅದು ಎಷ್ಟೊಂದು ಆಪ್ತವಾದ ಭಾವ ಕೊಟ್ಟಿತು. ಅದೊಂದು ಕೇವಲ ಆ್ಯಕ್ಸಿಡೆಂಟ್ ಆಗಿರಲಿಲ್ಲ. ಅದನ್ನು ದಾಟಿ ಬರಲು ನಾನು ಬಹಳಷ್ಟು ಶಕ್ತಿ, ಧೈರ್ಯ ಮತ್ತು ಶ್ರಮವನ್ನು ಹಾಕಬೇಕಾಯಿತು.

**◆ ಹೊಸತಲೆಮಾರಿನ ನೃತ್ಯ ಅಭ್ಯಾಸಿಗಳಿಗೆ ನಿಮ್ಮ ಸಂದೇಶವೇನು?**

ಎಷ್ಟೊಂದು ವಿಷಯಗಳು ಬದಲಾಗಿವೆ ಎಂದು ಅನಿಸುತ್ತದೆ. ಆದರೆ ಕೆಲವು ವಿಚಾರಗಳು ಹಾಗೆಯೇ ಉಳಿದುಕೊಳ್ಳುತ್ತವೆ ನಮ್ಮೊಡನೆ. ಅದೆಂದರೆ, ಏಕಾಗ್ರ ಚಿತ್ತ ಅಥವಾ ನಾವು ನಂಬಿದ ವಿಚಾರಗಳಿಗೆ ಬದ್ಧರಾಗಿರುವುದು. ಸಾಧಕರಾಗಬೇಕೆಂದು ಬಯಸುವ ಎಲ್ಲರಿಗೂ ಈ ಮೌಲ್ಯವು ಎಲ್ಲ ಕಾಲಕ್ಕೂ ಅನ್ವಯವಾಗುತ್ತದೆ. ಕಲಿಯುವುದಕ್ಕೆಂದು ನೀವು ಗುರುಗಳ ಬಳಿಗೆ ಹೋಗುವಾಗ, ನಿಮ್ಮ ತಯಾರಿ ಸಮರ್ಪಕವಾಗಿರಬೇಕು. ಹೊಸ ವಿಚಾರವನ್ನು ಸ್ವೀಕರಿಸುವ ರೀತಿಯಲ್ಲಿ ತೆರೆದ ಮನಸ್ಸಿರಬೇಕು. ಗುರುಗಳನ್ನು, ಸಂಪ್ರದಾಯವನ್ನು ಮತ್ತು ನೀವು ಕಲಿಯುವ ಜಾಗವನ್ನು ಗೌರವದಿಂದ ಕಾಣುವುದು ಕೂಡ ಮುಖ್ಯ. ನಮ್ಮ ಪುರಾಣಗಳಲ್ಲಿಯೂ ಇದೇ ಸಂದೇಶವಿದೆ. ಇಂದೂ ಇದೇ ಸಂದೇಶ ಅನ್ವಯವಾಗುತ್ತದೆ. ಮುಂದಿನ ದಿನಗಳಲ್ಲಿಯೂ ಇದು ಸಕಾಲಿಕವಾಗಿಯೇ ಉಳಿಯಲಿದೆ.

ಯಾವುದು ಒಳ್ಳೆಯದು ಎನಿಸುತ್ತದೋ, ಅದನ್ನು ಮಾಡುತ್ತ ಸಾಗಿರಿ. ನಿಮ್ಮೊಂದಿಗೆ ಒಂದು ಆದರ್ಶವು ಇರಲಿ, ಜೀವನದಲ್ಲಿ ಉತ್ತಮವಾದ ಅವಕಾಶಗಳು ಒಮ್ಮೆಯಷ್ಟೇ ಬರುತ್ತವೆ. ಆತ್ಮವಿಶ್ವಾಸದಿಂದ ಅದನ್ನು ಗುರುತಿಸುವುದು, ಜಗತ್ತನ್ನು ಎದುರಿಸಲು ಸಜ್ಜಾಗಿ ಇರುವುದು ಮುಖ್ಯ.

ಎಲ್ಲದಕ್ಕಿಂತ ಮುಖ್ಯವಾಗಿ ಇದು ಪ್ರತಿಕ್ರಿಯೆಗಳ ಯುಗವೆನಿಸಿದೆ. ನಮ್ಮ ದೈನಂದಿನ ಜೀವನದಲ್ಲಿ ನಾವು ಅರಿವು ಹೆಚ್ಚಿಸುವ, ಅರಿವಿನ ಆಳವನ್ನು ಹೆಚ್ಚಿಸುವ ಬಗ್ಗೆ ಯೋಚಿಸುವುದು ಮುಖ್ಯ. ಇದೆಲ್ಲ ಸಾಧ್ಯವಾಗುವುದು ಮೌನದಲ್ಲಿ. ಆದ್ದರಿಂದ ಮೌನದ ಅವಧಿಯನ್ನು ಸ್ವಲ್ಪವಾದರೂ ಹೆಚ್ಚಿಸಿಕೊಳ್ಳಬೇಕು. 'ಮೌನ ಬಂಗಾರ' ಎನ್ನುವುದನ್ನು ನಾವು ಯಾಕೆ ಮರೆಯುತ್ತಿದ್ದೇವೋ ಗೊತ್ತಿಲ್ಲ. ಎಲ್ಲದಕ್ಕೂ ಪಟ್ ಪಟ್ ಎಂದು ಬಾಯಿಬಿಟ್ಟು ಉತ್ತರಿಸುತ್ತ ಇರುತ್ತೇವೆ. ಪ್ರತಿಯೊಂದು ವಿಚಾರಕ್ಕೂ ಉತ್ತರಿಸುವುದಕ್ಕೆ ಮುನ್ನ ಎರಡು ಕ್ಷಣ ಮೌನವಾಗಿದ್ದರೆ ಸಾಕು, ಎಷ್ಟೋ ಸಮಸ್ಯೆಗಳಿಗೆ ಉತ್ತರ ದೊರೆಯುತ್ತದೆ. ಆ ಎರಡು ಕ್ಷಣದ ಮೌನದಲ್ಲಿ ಅರಿವಿನ ಹೊಳಹು ಅಡಗಿರುತ್ತದೆ.

●